X

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕಾರವಾರ ವಿಭಾಗ, ಕಾರವಾರ-581 301
OFFICE OF THE DEPUTY CONSERVATOR OF FORESTS, KARWAR DIVISION, KARWAR-581 301
ದೂರವಾಣಿ: 08382 226365
ಫ್ಯಾಕ್ಸ್ : 08382 220617

ಕ್ರ.ಸಂ:ಬಿ4/ಜಿಎಫ್ಎಲ್/ಎಫ್‌ಸಿಎ/ಸಿಆರ್-17/2015-16

ದಿನಾಂಕ:17-02-2020
06-03

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೆನರಾ ವೃತ್ತ,
ಶಿರಸಿ

-ರವರಿಗೆ,

ಮಾನ್ಯರೇ,

ವಿಷಯ: Diversion of 0.307 ha. of forest land in Fsy.No:44A Baleguli village for approach road to proposed stone crusher in Baleguli Sy.No:1/1, 1/2, 34, 1/3, 29/2 in favour of Sri. Narayan D.Nayak, M/s. Shantika Stone Crusher, Baleguli.

ಉಲ್ಲೇಖ:1) ಉಪ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರ) Ministry of Environment, Forests & Climate Change, Regional Office (Southern Zone) ಬೆಂಗಳೂರು ರವರ ಪತ್ರ ಸಂ:F.No. 4-KRB 1149/2018-BAN/520 ದಿನಾಂಕ: 06-03-2018

2) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಬೆಂಗಳೂರು ರವರ ಪತ್ರ ಸಂ:A5(2)/QRY/CR-1/2015-16 ದಿನಾಂಕ: 17-03-2018

3) ಈ ಕಚೇರಿಯ ಪತ್ರ ಸಮ ಸಂಖ್ಯೆ ದಿನಾಂಕ:22-03-2017, 30-06-2017 ಮತ್ತು 31-03-2018

4) ವಲಯ ಅರಣ್ಯಾಧಿಕಾರಿ, ಅಂಕೋಲಾ ಇವರ ವರದಿ ಸಂ:266/2018-19 ದಿನಾಂಕ:30-06-2018 ನೆದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ಉಪ-ವಿಭಾಗ, ಅಂಕೋಲಾ ರವರ ವರದಿ ಸಂ:ಸಅಸಂ/ಅಂ/ಜಿಎಫ್ಎಲ್/ಎಫ್‌ಸಿಎ/ವಿವ- /2017-18/245 ದಿನಾಂಕ:30-06-2018

ಬಾಳೇಗುಳಿ ಗ್ರಾಮದ ಮಾ.ಸ.ನಂ: Bl.No: 1, 2A, 2B ಮತ್ತು 3 (Sy.No:1/1, 1/2, 34, 1/3, 29/2) ರಲ್ಲಿ ಮೆ:ಶಾಂತಿಕಾ ಕ್ರಷರ್ ಘಟಕ ಸ್ಥಾಪಿಸಲು ಬಯಸಿದ ಕ್ಷೇತ್ರಕ್ಕೆ ತಲುಪಲು ರಸ್ತೆ ನಿರ್ಮಿಸಲು ಬಾಳೇಗುಳಿ ಘಾ.ಸ.ನಂ: 44A ರಲ್ಲಿ 0.307 ಹೆ. ಅರಣ್ಯ ಭೂಮಿ ಬಿಡುಗಡೆ ಕುರಿತು ಉಲ್ಲೇಖ (3) ರ ದಿನಾಂಕ: 22-03-2017 ಮತ್ತು 30-06-2017 ರ ಪತ್ರದಂತೆ ಪ್ರಸ್ತಾವನೆಯನ್ನು ಸಮುಚಿತೆ ಮಾರ್ಗದಲ್ಲಿ ಸಲ್ಲಿಸಿದ್ದು ಇರುತ್ತದೆ. ಸದರ ಸಲ್ಲಿಸಿದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರವು ಸೂಕ್ಷ್ಮವಾಗಿ ಪರೀಸಿಲಿಸಿದ ನಂತರ ಅರಣ್ಯ ಸಂರಕ್ಷಣೆಯ ಹಿತದೃಷ್ಟಿಯಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗುತ್ತಿಲ್ಲ ಎಂಬ ವಿಷಯವನ್ನು ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರ) ರವರು ಉಲ್ಲೇಖ (1) ರ ಪತ್ರದಲ್ಲಿ ತಿಳಿಸಿದ್ದು ಇರುತ್ತದೆ.

ಸದರ ಕ್ಷೇತ್ರವನ್ನು ಪರಿಶೀಲಿಸಿ, ಅರಣ್ಯೇತರ ಚಟುವಟಿಕೆಗಳು ನಡೆಯದಂತೆ ನಿಗಾವಹಿಸಲು ವಲಯ ಅರಣ್ಯಾಧಿಕಾರಿ, ಅಂಕೋಲಾ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ಉಪ-ವಿಭಾಗ, ಅಂಕೋಲಾ ರವರಿಗೆ ಉಲ್ಲೇಖ (3) ರ ದಿನಾಂಕ: 31-03-2018 ರ ಪತ್ರದಲ್ಲಿ ತಿಳಿಸಿದ್ದು ಇರುತ್ತದೆ.

ಅದರಂತೆ ವಲಯ ಅರಣ್ಯಾಧಿಕಾರಿ, ಅಂಕೋಲಾ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ಉಪ-ವಿಭಾಗ, ಅಂಕೋಲಾ ರವರು ಸ್ಥಳೀಕವಾಗಿ ಪರಿಶೀಲಿಸಿದ್ದು, ಸದರ ಸ್ಥಳದಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆಗಳು ನಡೆದಿದ್ದು ಕಂಡು ಬಂದಿರುವುದಿಲ್ಲ. ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ಉಲ್ಲಂಘನೆಯಾಗಿದ್ದು ಇರುವುದಿಲ್ಲ ಎಂದು ಪಂಚನಾಮೆಯೊಂದಿಗೆ ಉಲ್ಲೇಖದ (4) ರಂತೆ ಈ ಕಚೇರಿಗೆ ವರದಿಯನ್ನು ಸಲ್ಲಿಸಿರುತ್ತಾರೆ.

ವಲಯ ಅರಣ್ಯಾಧಿಕಾರಿ, ಅಂಕೋಲಾ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ಉಪ-ವಿಭಾಗ, ಅಂಕೋಲಾ ರವರ ವರದಿಯಂತೆ ಪರಿಶೀಲಿಸಲಾಗಿ, ಸದರ ಕ್ಷೇತ್ರದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ಉಲ್ಲಂಘನೆ ಮಾಡಿ ಯಾವುದೇ ಅರಣ್ಯೇತರ ಚಟುವಟಿಕೆಗಳನ್ನು ಕೈಗೊಂಡಿದ್ದು ಇರುವುದಿಲ್ಲ. ಹಾಗೂ ಉಲ್ಲೇಖ (1) ರ ಪತ್ರದಲ್ಲಿ ಸದರ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರವು ಸೂಕ್ಷ್ಮವಾಗಿ ಪರೀಸಿಲಿಸಿದ ನಂತರ ಅರಣ್ಯ ಸಂರಕ್ಷಣೆಯ ಹಿತದೃಷ್ಟಿಯಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿರುವುದರಿಂದ ಸದರ ಪ್ರಸ್ತಾವನೆಯನ್ನು ಮುಕ್ತಾಯಗೊಳಿಸಬಹುದಾಗಿದೆ ಎಂಬ ವರದಿಯನ್ನು ಸದರ ಸ್ಥಳದ ಪಂಚನಾಮೆ ಹಾಗೂ ವಲಯ ಅರಣ್ಯಾಧಿಕಾರಿ, ಅಂಕೋಲಾ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ಉಪ-ವಿಭಾಗ, ಅಂಕೋಲಾ ರವರ ವರದಿಯೊಂದಿಗೆ ಮಾನ್ಯರಲ್ಲಿ ಗೌರವಪೂರ್ವಕ ಒಪ್ಪಿಸಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕಾರವಾರ ವಿಭಾಗ,ಕಾರವಾರ.

ಪ್ರತಿಯನ್ನು ಮಾನ್ಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು, (ಎಫ್.ಸಿ.ಎ), ಅರಣ್ಯ ಭವನ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.

ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ಉಪ-ವಿಭಾಗ, ಅಂಕೋಲಾ ಇವರಿಗೆ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ವಲಯ ಅರಣ್ಯಾಧಿಕಾರಿ, ಅಂಕೋಲಾ ಇವರಿಗೆ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ರವಾನಿಸಿದೆ.
ದಿನಾಂಕ 06-03-2020